**(ದಿನಾಂಕಃ 09.03.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಎಸ್.ಕೆ ರವರಿಂದ ಃ-

34. ನಾನು ಹಾಜರುಪಡಿಸಿದ ನಿಪಿ30 ರಿಂದ ನಿಪಿ36 ರ ಕೈ ಬರಹ ಪಹಣಿ ಪತ್ರಿಕೇಯಲ್ಲಿ ನೀರಿನ ಮೂಲ ಕಟ್ಟೆ ಹಳ್ಳ ಜೋಪು (ಗುಡ್ಡದ ಮೇಲೆ ನೀರು ಇಂಗಿ ಬರುವ ನೀರು) ಎಂದು ನಮೂದಿಸಿರುತ್ತಾರೆ ಎಂದು ಸೂಚಿಸಿದರೆ ಸರಿ.

35. ನಾನು ಹಾಜರುಪಡಿಸಿದ ನಿಪಿ16 ರಿಂದ ನಿಪಿ31 ರ ಟಿಪ್ಪಣಿಗಳಲ್ಲಿ ಸದರಿ ನೀರಿನ ಮೂಲವನ್ನು ತೋರಿಸಿರುತ್ತಾರೆ ಎಂದು ಸೂಚಿಸಿದರೆ ಸರಿ. ನಾನು ಹಾಜರುಪಡಿಸಿದ ನಿಪಿ16 ರಿಂದ ನಿಪಿ31 ರಲ್ಲಿ ಅವುಗಳ ಪೈಪ್ ಲೈನ್ ನ ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವ ಇಚ್ಚೆಯಿಂದ ಮುಂದುವರಿದು ಅದರ ವಿಸ್ತೀರ್ಣ 300 ಅಡಿ ಉದ್ದ 2 ಇಂಚಿನ ಪೈಪ್ ಮತ್ತು ಸಿ ಟ್ಯಾಂಕ್ ಇರುತ್ತದೆ ಎಂದು ನುಡಿಯುತ್ತಾರೆ.

36. ಕಟ್ಟೆ ಜೋಪು ಮತ್ತು ಹಳ್ಳದಿಂದ ಬರುವ ಲೈನ್ ಗೆ ಯಾವುದೇ ಪೈಪ್ ಲೈನ್ ಇರುವುದಿಲ್ಲ ಹಿಂದಿನ ಕಾಲುವೆ ಮೂಲಕ ತೋಟಕ್ಕೆ ಬರುತ್ತದೆ ಎಂದು ಸೂಚಿಸಿದರೆ ಸರಿ. ಅದು ಹಿಂದೆ ಇದ್ದು ಈಗಲೂ ಸಹ ಹಾಗೇ ಇರುತ್ತದೆ ಎಂದು ಸೂಚಿಸಿದರೆ ಸರಿ. ನಾನು ಹಾಜರುಪಡಿಸಿದ ನಿಪಿ32 ರಿಂದ ನಿಪಿ36 ರಲ್ಲಿ ದಾವಾ ಬಿ, ಸಿ ಮತ್ತು ಡಿ ಸ್ವತ್ತುಗಳ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.